ದಿನಪತ್ರಿಕೆ
1 ಕಾಸು
ತಿಂಗಳಿಗೆ
ವಾರಪತ್ರಿಕೆ
ಕ್ಕೆ ಸೇರಿ
4 ಆಣೆ

Regd No. M 1299 SATYAVADI

ಸತ್ಯವಾದಿ

ಸಂಪುಟ 26] ಮಂಗಳವಾರ 26—1—1943 [ಸಂಚಿಕೆ 89

ಅಕ್ಷರ ಸಾಹಿತ್ಯ ಪತ್ರಿಕೆ
ಭಾವಪರಿಪೂರ್ಣವಾದ ಕಥೆ.
ಓದಲು ಪ್ರಾರಂಭಿಸಿದರೆ ಕಥೆ ಪೂರ್ತಿಯಾ-
ವರೆಗೂ ಊಟಕ್ಕೆ ಕೂಡ ಏಳಲು ಮನ
ಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇ-
ಜು 1 ಆಣೆ. ಮುಂಗಡ ಕಳುಹಿಸಬೇಕು.
ಸತ್ಯವಾದಿ ಆಫೀಸ್ ಮೈಸೂರು

ರಷ್ಯನರ ಮುಂದೋಟ – ಜರ್ಮನರ ಹಿಂದೋಟ

ಸಕ್ಕರೆಮೂಟೆ ವಶಪಡಿಸಿಕೊಂಡರು

ಬೊಂಬಾಯಿನ ಒಂದು ಹೋಟಲಿನಲ್ಲಿ ಏಳತ್ತೊಂದು ಮೂಟೆ ಸಕ್ಕರೆಯನ್ನು ಸರ್ಕಾರದವರು ವಶಪಡಿಸಿಕೊಂಡರು.

ಧಾಳಿಯಲ್ಲಿ ಸಾವು ನೋವು

ಈಚೆಗಾದ ಲಂಡನ್ ವಿಮಾನ ಧಾಳಿಯಲ್ಲಿ ಜನರು ಧಾಳಿ ಕಾಲದಲ್ಲಿ ಗೊತ್ತಾದ ಸ್ಥಳಕ್ಕೆ ಹೋಗದಿದ್ದರಿಂದ ಸಾವು ನೋವುಗಳು ವಿಶೇಷವಾಯಿತು.

ರೋಮೆಲ್ಲನ ಸೈನ್ಯ

ಈಗ ಟುನಿಷಿಯಾದಲ್ಲಿ ರೋಮೆಲ್ ಟುನಿಷಿಯಾದಲ್ಲಿ ಇರುವ ವಾರ್ ಆನರ್ ಇವರಬ್ಬರ ಸೈನ್ಯವು 100–150 ಸಾವಿರಕ್ಕೆ ಕಮ್ಮಿಯಿಲ್ಲವೆಂದು ಹೇಳಲಾಗಿದೆ. ಇವರೆಲ್ಲರೂ ಸುರಿತ ಸೈನೀಕರಂತೆ.

ಕರ್ನಲ್"ಗಳು ವಾಪಸ"

ಸ್ಟಾಲಿನ್‌ಗ್ರಾಡಿನಲ್ಲಿ ಕರ್ನಲ್ ಮುದ್ದಿನ ವಿಮಾನತಕ್ಕೆ ಆಫೀಸರುಗಳನ್ನೆಲ್ಲಾ ವಿಮಾನ ಮೂಲಕ ವಾಪಸ್ ಜರ್ಮನಿಗೆ ಕರೆಸಿಕೊಳ್ಳಲಾಗಿದ್ದಾರೆ.

ಸಂಸ್ಕೃತಕ್ಕೆ ಸೊನ್ನೆ

ಹಣದ ಅಭಾವದಿಂದ ಗುಂಟೂರು ಡಿಸ್ಟ್ರಿಕ್ಟಿನಲ್ಲಿನ ಒರಡು ಸ್ಥಳಗಳಲ್ಲಿ ಏಸ್ಕೂಬಾಕಿ ಎಲ್ಲಾ ಪಾಠಶಾಲೆಗಳಲ್ಲಿ ಮುಂದಿನ ವರ್ಷದಿಂದ ಸಂಸ್ಕೃತ ಶಾಂಗತಿಯೇ ಇಲ್ಲ!

ಈ ದಿವಸ ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗು.

ಹೊಸ ಸುದ್ದಿ

ಕಾಗದವನ್ನು ಅತಿ ಮಿತವ್ಯಯದಿಂದ ಉಪಯೋಗಿಸಬೇಕೆಂದು ಸಿಲೋನ್ ಸರ್ಕಾರದವರ್ ಆಜ್ಞೆಯಾಗಿದೆ.

ಬೆಸೋಡೆವ್ಪರದಲ್ಲಿ ಕಳ್ಳರು ಒಂದು ಮನೆಗೆ ನುಗ್ಗಿ 40000 ರೂಪಾಯಿ ಬೆಲೆ ಬಾಳುವ ಆಭರಣಗಳನ್ನು ತೆಗೆದುಕೊಂಡು ಪರಾರಿಯಾಗಿರುವರು.

ಭೋಪಾಲಿನಲ್ಲಿ ಅಗಲೇ ಸ್ಟಾಂಡರ್ಡ್ ಒಟ್ಟಿ ಉವಜೋಗ ಸ್ಥಾರಂಭವಾಗಿದೆ. ದಿನಕ್ಕೆ 4–5 ಸಾವಿರ ಗಜ ಎ್ಯಾವಾರವಾಗುತ್ತಿದ್ದು, ಜನರು ಗುಂಪುಗುಂಪಾಗಿ ತಮ್ಮ ಒಟ್ಟಿ ಮಡಿಯಲು ಸರ್ಕಾರಿ ದಿಪ್ಪೋಗಳಿಗೆ ಸುಗ್ಗುತ್ತಿದ್ದಾರೆ

ಜಪಾನಿನವರು ಟೋಕಿಯೋನಿಂದ ನಾಗಸಾಕಿಗೆ ಸಮುದ್ರವ ಕೆಳಗೆ 6 ಮೈಲಿ ಸುರಂಗ ಮಾರ್ಗವನ್ನು ಸಿದ್ಧಮಾಡುತ್ತಿದಾರೆ.

ಕರಾಚಿಯಲ್ಲಿ ಬಾಂಬು ತಯಾರಾಗ್ತಾಡುತ್ತಿದ್ದ ಒಂದು ಚಿಕ್ಕ ಕಾರ್ಖಾನೆ ಪತ್ತೆಯಾಗಿತೆ.

ಕೊಚಿನ್ ಮತ್ತು ಚಿದಂಬರಗಳಲ್ಲಿ ಚಿಲ್ಲರೆ ಸಂಗ್ರಹಿಸಿದ್ದು ಕೆಲವರು ಅಂಗಡಿಗಾರರು ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

ಮಾರ್ಸೇಲ್ಸಿನಲ್ಲಿ 6000 ಜನರನ್ನು ವಿಚಿ ಪೋಲೀಸಿನವರು ದಸ್ತಗಿರಿ ಮಾಡಿರುವರು.

ಯುದ್ಧವಾರ್ತೆ

ರಷ್ಯಾದ ಎಲ್ಲಾ ರಣರಂಗಗಳಲ್ಲೂ ರಷ್ಯನರ ಕೈ ಮೇಲಾಗಿದ್ದು ಜರ್ಮನರು ಹಿಂದಟ್ಟುತ್ತಿದ್ದಾರೆ.

ರಷ್ಯಾ ಸೈನ್ಯವು, ಕ್ರೂಬಾರ್ಕ್ ಪೆಚೆರ್ಸ್ಕ್ ಸಾಲ್ಯೆಕ್ಕ ಮೂಲಕ ಉಕ್ರೇನ್ ಕಡೆಗೆ ನುಗ್ಗುತ್ತಿದೆ

ಲೆನಿಂಗ್ರಾಡಿನ ನೌಕಾ ನಿರ್ಮಾಣಗಳ ಮೇಲೆ ಆರ್. ಎ. ಎಫ್. ನವರು ಧಾಳಿ ನಡೆಸಿರುವರು.

ಲಿಬಿಕಾ ಮರಳುಕಾಡಿನ ಮಿಸ್ರಾ ಪಟ್ಟಣವನ್ನು ಫ್ರೆಂಚರು ಹಿಡಿದಿದ್ದಾರೆ.

800 ಮಂದಿ ಗ್ರೀಕ್ ಆಫೀಸರುಗಳು ನಾಜಿಕ್ರಿಯ ಖೈದಿಗಳು ಇಟಾಲಿಯನ್ ಕ್ಯಾಂಪಿಗೆ ರವಾನಿಸಲ್ಪಟ್ಟಿರುವರು.

650 ಮಂದಿ ರಷ್ಯಾ ಯುದ್ಧ ಖೈದಿಗಳು ಬೆಲ್ಜಿಯಂ ಗಣಿಗಳಲ್ಲಿ ಕೆಲಸಮಾಡಲು ಬಂದಿರುವರೆಂದೂ ಕೆಲವು ದಿನಗಳಿಂದ ಹೊಟ್ಟೆಗೆ ಹಿಟ್ಟಿಲ್ಲದೆ ಸುಸ್ತಾಗಿರುವರೆಂದೂ ಬೆಲ್ಜಿಯಂ ಫ್ರೀ ನ್ಯೂಸ್ ಏಜೆನ್ಸಿ ವಾರ್ತೆ.

ಆಸ್ಟ್ರೇಲಿಯಾಕ್ಕೆ ಶತ್ರು ಭೀತಿಯು ಇನ್ನೂ ತಪ್ಪಿಲ್ಲವೆಂದು ಅಲ್ಲಿಯ ಮಂತ್ರಿಯು ಹೇಳಿಕೆಯಾಗಿದೆ.

ಪೋಲೀಸರಿಗೆ ಸಿಕ್ಕದೇ ತಪ್ಪಿಸಿಕೊಂಡಿದ್ದ ಬೊಂಗಳೂರು ಯೂನಿವರ್ಸಿಟಿ ಯೂನಿಯನ್ ಸೆಕ್ರೆಟರಿ ಶ್ರೀ ವಸಂತಯ್ಯನವರು ದಸ್ತಗಿರಿ ಮಾಡಲ್ಪಟ್ಟಿರುವರು.

ಇಂದಿನ ಇಂಡಿಯಾ ! . . . ಮುಂದಿನ ಇಂಡಿಯಾ !!

ಈಗ ಇಂಡಿಯಾಕ್ಕೆ ಬಂದಿರುವ ಮಿ|| ರೂಸವೆಲ್ಟರ ಪ್ರತಿನಿಧಿಯಾದ ಮಿ|| ಫಿಲಿಪ್ಸರು ಹಿಂದೂಸ್ಥಾನದ ವೃತ್ತಪತ್ರಿಕೆಯವರಲ್ಲಿಮಾತನಾಡುತ್ತಾ– "ನಾನು ಇಲ್ಲಿನ ಎಲ್ಲಾ ವಿಚಾರವನ್ನೂ ತಿಳಿದು ಕೊಂಡು ಮಿ|| ರೂಸವೆಲ್ಟರಿಗೆ ತಿಳಿಸುತ್ತೇನೆ" ಎಂದರು. ಇದರ ಅರ್ಥವೇನು ? ಮುಂದೆ ಹಿಂದೂಸ್ಥಾನದ ರಚನಾಕ್ರಮದಲ್ಲಿ ಅಂಗ್ಲೇಯರ ಕೈವಾಡವಿಲ್ಲ, ತಾವು ಪ್ರಯೇಶಿಸುತ್ತೇವೆ ಎಂದರ್ಥವಲ್ಲವೆ ? ಮುಂದಿನ ರಚನಾಕ್ರಮ ಮಾಡುವವರು ಯಾರು ? ಪರದೇಶೀಯರಲ್ಲ. ಹಿಂದೂಸ್ಥಾನದವರೇ, ಈಗ ಜೈಲಿನಲ್ಲಿರುವವರು ! ಮಿ|| ಫಿಲಿಪ್ಸರು ಜೈಲಿಗೆ ಹೋಗಿ ಅಲ್ಲಿರುವ ಹಿಂದೂಸ್ಥಾನದ ಮುಖಂಡರನ್ನು ನೋಡಿದಾಗ. ಈಗಲೇ ಸ್ವತಂತ್ರ ಕೊಟ್ಟರಲ್ಲದೆ ಮುಂದೆ ತಾನು ಸ್ವತಂತ್ರನಾಗಿ ನಿಂತು ಮಾತನಾಡಬಹುದು. ಇವರು ಈಗ ಡೆಲ್ಲಿಯಲ್ಲಿ ಬಂದು ತಿಂಗಳಿದ್ದು ಆ ಕಾಲದಲ್ಲಿ ಅಲ್ಲಿಗೆ ಬರುವ ವ್ಯಕ್ತಿಗಳನ್ನೆಲ್ಲಾ ನೋಡಿ, ದೇಶ ದೇಶದಲ್ಲಿ ಸಂಚಾರ ಮಾಡುವರು. ಆಗ ಗಾಂಧಿಯವರನ್ನೂ ಸಹ ನೋಡಬಹುದು. ಮಿ|| ಫಿಲಿಪ್ಸರು 'ಅಮೇರಿಕಾದಿಂದ ಹಿಂದೂಸ್ಥಾನದವರು ಕೆಲಸವನ್ನು ಕಲಿಯಬೇಕು ; ಹಿಂದೂಸ್ಥಾನದಿಂದ ಅಮೇರಿಕಾದವರೂ ಕೆಲಸವನ್ನು ಕಲಿಯಬೇಕು" ಎಂದು ಹೇಳಿರುತ್ತಾರೆ ಇದರ ಅರ್ಥವೇನು ! ನಿಜ ! ಅಮೇರಿಕಾದವರಿಂದ ನಾವು ಕಲ್ಲಿಯಲು ನಮಗೆ ಅಪ್ಪಣೆ ಇದೆಯೇ ? ನಮ್ಮಿಂದ ಅಮೇರಿಕಾದವರು ಕೆಲಸವನ್ನು ಕಲಿಯಬೇಕೆಂದು ಇದುವರಿಗೂ ಯಾರೂ ಬಾಯಿ ಬಿಟ್ಟಿಲ್ಲ. ನಮ್ಮನ್ನು ಇಷ್ಟು ಮರ್ಯಾದೆ ಮಾಡಿದ್ದಕ್ಕೆ ಮಿ || ಫಿಲಿಪ್ಸರಿಗೆ ವಂದನೆಗಳು.

ಸೂಚನೆ— ನಾಳೆಯಿಂದ ಸಂಸ್ಥಾನದ ಪರ್ತಮಾನಗಳು ಪ್ರಕಟಿಸಲಾಗುತ್ತೆ.

ವಿವಿಧ ವಿಷಯ

ಯಾಪ್ಪಚ್ಚೆ, ಮಂಬು ವಾಗಿ ತಿಂದು ತಿಂದು ಕೊಪ್ಪರವುದೆ ಎಂದು ಕೆಲವರು ಹೇಳುವರು. ಶ್ರೀ ಪಿ ಎಸ್. ನಾಯಿಡು, ಬಿ. ಎ. ಅಲಹಾಬಾದ್ ವಿಶ್ವವಿದ್ಯಾನಿಲಯದವರು ಹೇಳುವುದು– ಜರ್ಮನಿ ಇಟಲಿ ಜಪಾನ್ ಇವುಗಳನ್ನು ಶಸ್ತ್ರಾಸ್ತ್ರ ಇಲ್ಲದ ಹಾಗೆ ಮಾಡಿದರೂ ಆಗುವುದಿಲ್ಲ. ಎಲ್ಲಾ ಜನಾಂಗಗಳೂ ನೈತಿಕಶಕ್ತಿಯುಳ್ಳವರಾಗಿ ನಡೆದುಕೊಂಡರೆ ಯುದ್ಧವೇ ಇಲ್ಲದಂತಾಗುವುದು.

ಈಗ ಇಂಗ್ಲೆಂಡಿನಲ್ಲಿ ತಯಾರಾಗುವ ಆವರೋ ಲಂಕಾಸ್ಟರ್ ವಿಮಾನಗಳು ಗಂಟೆಗೆ 300 ಮೈಲಿ ವೇಗದಲ್ಲಿ ಓಡುತ್ತಿವೆ. 3000 ಮೈಲಿ ಓಡುವಷ್ಟು ಪೆಟ್ರೋಲನ್ನು ಈ ವಿಮಾನದಲ್ಲಿ ಇಡುವರು. ಇಲ್ಲದೆ 8 ಟನ್ ಬಾಂಬುಗಳನ್ನೂ ಸಹ ತುಂಬಿಕೊಂಡು ಹಾರಾಡಬಲ್ಲದು.

ಇದುವರೆಗೆ ಮಿತ್ರ ರಾಷ್ಟ್ರದವರು ಜರ್ಮನಿ–ಇಟಲಿಯರ ಬಂದು ವಿಲಿಯಟ್ಟಿನಷ್ಟು ನಾಶಮಾಡಿಲ್ಲ.

ಲಿಬಿಯಾದಲ್ಲಿ ಇಜ್ಜಲ ಅಭಾವದಿಂದ ಎಲಕ್ಟ್ರಿಕ್ ಉತ್ಪತ್ತಿ ಮಾಡುವುದಕ್ಕೆ ಆಗದ ಊರಿನಲ್ಲಿ ದೀಪವೇ ಇಲ್ಲ.

ರೈಲಿಗೂ ಭಾನುವಾರ ರಜಾ !

ಸಿಲೋನಿನಲ್ಲಿ ನೊನ್ನೆಯಿಂದ ಭಾನುವಾರದ ದಿನ ಯಾವ ರೈಲುಗಳೂ ಹೋಗುವುದಿಲ್ಲ. ಆದರೆ ಶನಿವಾರವೇ ಹೊರಟ ರೈಲುಗಳು ಮಾತ್ರ ತಮ್ಮ ಗಮ್ಯಸ್ಥಾನವನ್ನು ಸೇರುವವರೆಗೂ ಹೋಗುವುವು. ಹೀಗೆ ಈ ನಿಯಮವು ಕೊಲಂಬೋ-ತಲೈಮನ್ನಾರ್ ರೈಲಿಗೆ ಅನ್ವಯಿಸುವುದಿಲ್ಲ. ಯುದ್ಧದ ದೆಸೆಯಿಂದ ಈ ಏರ್ಪಾಡು ಮಾಡಲಾಗಿದೆ.

Short & Local Advts

=ಅಪೆರ=

ಕು ನ್ನಾ ರ' ಬಾ ಪ'

ನಿನ್ನ ಊರಿನ ಮೆಚ್ಚಿನ ಚಲನ ಚಿತ್ರ ಮಂದಿರಗಳಲ್ಲಿ ಎದುರುನೋಡಿ

— ಹೆಚ್ ಆರ್. ಜಿ. ಸಿ. ಯವರ —

ಶ್ರೀ ಪಿ ಕ್ಚ ರ್ಸ್

ಗಾಂಧಿಕಮ್ಮಟ್ಟಿ, ಮೈಸೂರು ಇವರ ಸಂಗೀತರತ್ನ ಆಸ್ಥಾನ ವಿದ್ವಾನ್ ಟಿ. ಚೌಡಯ್ಯನವರು, ಕಲ್ಚರ್ಡ್ ಕಮೆಡಿಯನ್ ಕೆ ಹಿರಣ್ಣಯ್ಯನವರು ಅಭಿನಯಿಸಿರುವ

ವಾಣಿ or (VIOLINIST)

ಎಂಬ ಕನ್ನಡಸಾಮಾಜಿಕ ಚಿತ್ರ.

— ಗುಲ್ಮ —

ಎಲ್ಲಾತರಹದ ಜೀರ್ಣಕೋಶದ ವ್ಯಾಧಿಗಳಿಗೆ (ಹೊಟ್ಟೆ ನೋವು, ತೇಗು, ಎದೆ ನೋವು. ಎದೆಉರಿ, ಪಕ್ಕಶೂಲೆ, ವಾಂತಿ. ಜಾಯಿ-ನೀರು) ಇವುಗಳಿಗೆಲ್ಲಾ ಸಮ್ಮಲ್ಲಿ ಖಾತ್ರಿಯಾದ ಔಷಧಿ ದೊರೆಯುತ್ತದೆ. ಅಪೇಕ್ಷಿಸುವರು ಚಿಹ್ನೆಗಳನ್ನು ಕುರಿತು ೦ ೨ ೦ ನ್ಯಾಪಿನೊಡನೆ ಒರೆಯಿರಿ.

ಎಸ್. ಲಿಂಗೇಗೌಡ,

ಕುರುಬರ ಬೀದಿ, **ಕೊಳ್ಳೇಗಾಲ.**

ಉ ತ್ತ ಮ ಕಾ ಫಿ ಪ್ಪ ಡಿ

ಸ.ವಾಸನೆ! ಅತ್ಯಂತ ರುಚಿ!

ಯಾವಾಗಲೂ ಲಕ್ಷ್ಮಿನಾರಾಯಣ ಕಾಫೀಪುಡಿಯನ್ನೇ ಉಪಯೋಗಿಸಿ.

ಲಕ್ಷ್ಮಿನಾರಾಯಣ ಕಾಫೀವರ್ಕ್ಸ್ !

ಕೊಳ್ಳೇಗಾಲ

Edited, Printed & published by M. S. Krishna Rao, at the Satyavadi P r e s s. Chamaraja. Agrahar, Mysore.